ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಸಚಿವ ಸಂಪುಟ

ಪತ್ರಿಕೆಯ ಹೆಸರು : NAME OF THE NEWS PAPER: [illegible]    ದಿನಾಂಕ : DATE : 22/1/21

# ಸೀರೆ, ಸಮವಸ್ತ್ರ, ತ್ರಿಚಕ್ರ ವಾಹನ ವಿತರಣೆ

## 10.27 ಕೋಟಿ ರೂ. ಮೊತ್ತದ ಯೋಜನೆಗೆ ಸಚಿವ ಸಂಪುಟ ಒಪ್ಪಿಗೆ

**ಬೆಂಗಳೂರು:** 2020-21ನೇ ಸಾಲಿಗೆ ಐಸಿಡಿಎಸ್ ಯೋಜನೆಯಡಿ 62580 ಅಂಗನವಾಡಿ ಸಹಾಯಕಿಯರು, 65911 ಅಂಗನವಾಡಿಕಾರ್ಯಕರ್ತೆಯರು ಸೇರಿ ಒಟ್ಟು 1,28,491 ಮಂದಿಗೆ ಒಂದು ಜತೆ ಸೀರೆ ನೀಡಲು 10.27 ಕೋಟಿ ರೂ. ಮೊತ್ತದ ಯೋಜನೆಗೆ ರಾಜ್ಯ ಸಚಿವ ಸಂಪುಟ ಒಪ್ಪಿಗೆ ನೀಡಿದೆ.

ಸಂಪುಟ ಸಭೆ ಬಳಿಕ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಬಸವರಾಜ ಬೊಮ್ಮಾಯಿ, ತಲಾ 400ರೂ. ನಂತೆ ಎರಡು ಸೀರೆ ನೀಡುವುದು ಈ ಯೋಜನೆ ಉದ್ದೇಶವಾಗಿದೆ. ಇದರ ಜತೆಯಲ್ಲೇ 2020-21 ನೇ ಸಾಲಿನ ಕೇಂದ್ರ ಸರ್ಕಾರದ ಪೋಷಣ್ ಅಭಿಯಾನದಡಿ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರಿಗೆ 10.27 ಕೋಟಿ ರೂ. ವೆಚ್ಚದಲ್ಲಿ ಹೆಚ್ಚುವರಿಯಾಗಿ ಒಂದು ಜತೆ ಸಮವಸ್ತ್ರ ಖರೀದಿಸಲು ಸಂಪುಟ ಅನುಮೋದನೆ ನೀಡಿದೆ. ಇದು ಕೈಮಗ್ಗ ಅಭಿವೃದ್ಧಿ ನಿಗಮದ ಮೂಲಕವೇ ಖರೀದಿಸಲಾಗುವುದು ಎಂದು ವಿವರಿಸಿದರು.

2020-21 ನೇ ಸಾಲಿನಲ್ಲಿ ತೀವ್ರ ತರನಾದ ದೈಹಿಕ ವಿಕಲಚೇತನರಿಗೆ 1500 ಯಂತ್ರ ಚಾಲಿತ ತ್ರಿಚಕ್ರ ವಾಹನಗಳನ್ನು 12.5 ಕೋಟಿ ರೂ. ವೆಚ್ಚದಲ್ಲಿ ಖರೀದಿಸಿ ವಿತರಿಸಲು ಸಂಪುಟ ಅನುಮೋದನೆ ನೀಡಿದೆ ಎಂದು ಹೇಳಿದರು.

## ಅನಧಿಕೃತ ಬಡಾವಣೆಗಳ ಅಧಿಕೃತಕ್ಕೆ ಅಸ್ತು



ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಎಫ್‌ಎಆರ್‌ಗೆ (ಹೆಚ್ಚುವರಿ ನಿರ್ಮಿತ ಪ್ರದೇಶ) ಅವಕಾಶ ಕಲ್ಪಿಸುವ ಉದ್ದೇಶದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ವಿಧೇಯಕ-2020ಕ್ಕೆ ಸಂಪುಟ ಅನುಮೋದನೆ ನೀಡಿದೆ. ಜತೆಗೆ ಕರ್ನಾಟಕ ಗೃಹ ಮಂಡಳಿ ವತಿಯಿಂದ ಸಕ್ಷಮ ಪ್ರಾಧಿಕಾರಗಳಿಂದ ಅನುಮತಿ ಪಡೆಯದೆ ರಚನೆ ಮಾಡಿ ಪೂರ್ಣಗೊಳಿಸಿರುವ 65 ಬಡಾವಣೆಗಳ ಯಥಾಸ್ಥಿತಿ ವಿನ್ಯಾಸ ನಕ್ಷೆಗಳಿಗೆ ಒಪ್ಪಿಗೆ ನೀಡುವ ಬಗ್ಗೆಯೂ ಸಂಪುಟ ಅನುಮೋದಿಸಿದೆ. ಸ್ಥಳೀಯ ಸಂಸ್ಥೆಗಳ ಆಕ್ಷೇಪಣೆಯಿಂದ ಗೃಹ ಮಂಡಳಿ ಬಡಾವಣೆ ಅನುಮೋದನೆ ಕೋರಿ ಪ್ರಸ್ತಾವನೆ ಸಲ್ಲಿಸಿದ್ದರೂ ನಾನಾ ಕಾರಣಗಳಿಂದ 2000 ರಿಂದ ಸುಮಾರು 65 ಬಡಾವಣೆಗಳಿಗೆ ಸಕ್ಷಮ ಪ್ರಾಧಿಕಾರಿಗಳು ಒಪ್ಪಿಗೆ ಸೂಚಿಸಿರಲಿಲ್ಲ. ಇದರಿಂದ ಸಾಕಷ್ಟು ಸಮಸ್ಯೆಗಳು ಉಂಟಾಗಿದ್ದವು. ಇದಕ್ಕೆ ಪರಿಹಾರವಾಗಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಬಸವರಾಜ ಬೊಮ್ಮಾಯಿ ಹೇಳಿದರು.

## ಏಳು ಸಚಿವರು ಸಂಪುಟ ಸಭೆಗೆ ಗೈರು



**ಬೆಂಗಳೂರು:** ಖಾತೆ ಹಂಚಿಕೆ ಅಸಮಾಧಾನದ ಬೆನ್ನಲ್ಲೇ ಏಳು ಸಚಿವರು ಸಂಪುಟ ಸಭೆಗೆ ಗೈರು ಹಾಜರಾಗಿದ್ದರು. ಆ ಪೈಕಿ ಸುರೇಶ್‌ಕುಮಾರ್, ಮಾಧುಸ್ವಾಮಿ ಸೇರಿ ಹಲವರು ಅನುಮತಿ ಪಡೆದಿದ್ದರು ಎಂದು ಹೇಳಲಾಗಿದೆ. ಸಂಪುಟ ಸಭೆ ಪ್ರಾರಂಭವಾದ ನಂತರ ಕಂದಾಯ ಸಚಿವ ಆರ್.ಅಶೋಕ್ ಅವರು ಸಂಪುಟಕ್ಕೆ ಗೈರು ಹಾಜರಾದ ಸಚಿವರನ್ನು ದೂರವಾಣಿ ಮೂಲಕ ಸಂಪರ್ಕಿಸಿ ಸಭೆಗೆ ಬರುವಂತೆ ಮನವಿ ಮಾಡಿದರು. ಆದರೂ ಬರಲಿಲ್ಲ ಎಂದು ತಿಳಿದು ಬಂದಿದೆ. ಮುಖ್ಯಮಂತ್ರಿಯವರ ಜತೆ ಮಾತುಕತೆ ನಂತರವೂ ಡಾ.ಕೆ.ಸುಧಾಕರ್, ಎಂ.ಟಿ.ಬಿ.ನಾಗರಾಜ್, ಗೋಪಾಲಯ್ಯ ಸೇರಿ 7 ಸಚಿವರು ಸಂಪುಟ ಸಭೆಗೆ ಗೈರು ಹಾಜರಾಗಿದ್ದರು. ಈ ಪೈಕಿ ಕಾರ್ಯಕ್ರಮಗಳ ನಿಮಿತ್ತ ಪ್ರವಾಸದಲ್ಲಿದ್ದ ಸುರೇಶ್‌ಕುಮಾರ್, ಮಾಧುಸ್ವಾಮಿ ಒಪ್ಪಿಗೆ ಪಡೆದಿದ್ದರು ಎಂದು ಸಚಿವ ಬಸವರಾಜ ಬೊಮ್ಮಾಯಿ ಹೇಳಿದರು. ಈ ಮಧ್ಯೆ, ಸಂಪುಟ ಸಭೆಯಲ್ಲಿ ಸಿಎಂ ಯಡಿಯೂರಪ್ಪ ಅವರು, ಖಾತೆ ಹಂಚಿಕೆ ಸಂಬಂಧದ ಬೇಸರದ ಬಗ್ಗೆ ಮಾಧ್ಯಮಗಳ ಮುಂದೆ ಮಾತನಾಡಬೇಡಿ ಎಂದು ಕಿವಿಮಾತು ಹೇಳಿದರು ಎನ್ನಲಾಗಿದೆ.

## ಇ-ಆಡಳಿತ ವಿಸ್ತೃತ ಜಾಲ ವಿಸ್ತರಣೆ

**ಬೆಂಗಳೂರು:** ತಹಶೀಲ್ದಾರ್ ಕಚೇರಿ, ಜಿಲ್ಲಾ ತರಬೇತಿ ಕೇಂದ್ರ, ತಾಲೂಕು ಪಂಚಾಯಿತಿ ಕಚೇರಿ, ಪ್ರಾದೇಶಿಕ ಆಯುಕ್ತರ ಕಚೇರಿಗಳಲ್ಲಿ ವಿಡಿಯೋ ಕಾನ್ಫರೆನ್ಸ್ ವ್ಯವಸ್ಥೆ ಕಲ್ಪಿಸಲು ಸಚಿವ ಸಂಪುಟ ಒಪ್ಪಿಗೆ ನೀಡಿದೆ. ಇ-ಆಡಳಿತ ಉತ್ತಮಗೊಳಿಸಲು ವಿಸ್ತೃತ ಜಾಲ ವಿಸ್ತರಿಸುವ ಸಂಬಂಧ ಜಿಲ್ಲಾ ಪಂಚಾಯಿತಿ ಮೂಲಕ ವಿಡಿಯೋ ಸಂವಾದ ನಡೆಸುವ 32 ಕೋಟಿ ರೂ. ಮೊತ್ತದಲ್ಲಿ ಯೋಜನೆ ರೂಪಿಸಲಾಗಿದೆ ಎಂದು ಸಚಿವ ಬಸವರಾಜ ಬೊಮ್ಮಾಯಿ ಹೇಳಿದರು.

ಹೊಸದಾಗಿ 52 ತಹಸೀಲ್ದಾರ್ ಕಚೇರಿ, 30 ಜಿಲ್ಲಾ ತರಬೇತಿ ಕೇಂದ್ರ, 227 ತಾಪಂ ಕಚೇರಿ, 3 ಪ್ರಾದೇಶಿಕ ಆಯುಕ್ತರ ಕಚೇರಿಗಳಲ್ಲಿ ವಿಡಿಯೋ ಸಂವಾದಕ್ಕೆ ವ್ಯವಸ್ಥೆ ಮಾಡಲಾಗುವುದು. ಇದಕ್ಕೆ ತಗಲುವ ವೆಚ್ಚ ಬೇರೆ ಬೇರೆ ಕಾಮಗಾರಿಗಳಡಿ ಕಾಯ್ದಿರಿಸುವ ಇಎಂಡಿ ಮೊತ್ತದಲ್ಲಿ ಭರಿಸಲಾಗುವುದು ಎಂದು ತಿಳಿಸಿದರು. ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮ ಪಡೆದಿದ್ದ 31 ಕೋಟಿ ರೂ. ಸಾಲದ ಪೈಕಿ 7 ಕೋಟಿ ರೂ. ತೀರಿಸಿದ್ದು ಉಳಿದ 24 ಕೋಟಿ ರೂ. ಸಾಲಕ್ಕೆ 1 ವರ್ಷಕ್ಕೆ ಸರ್ಕಾರ ಬ್ಯಾಂಕ್ ಖಾತರಿ ನೀಡಲು ಸಂಪುಟ ಒಪ್ಪಿಗೆ ನೀಡಿದೆ ಎಂದು ಹೇಳಿದರು.

**ನೀರಾವರಿ ಯೋಜನೆ:** ದಾವಣಗೆರೆ ಜಿಲ್ಲೆ ಹೊನ್ನಾಳಿ ವಿಧಾನಸಭೆ ಕ್ಷೇತ್ರದ ವ್ಯಾಪ್ತಿಯ 19 ಕೆರೆಗಳಿಗೆ ತುಂಗಭದ್ರಾ ನದಿಯಿಂದ ನೀರು ತುಂಬಿಸುವ ಬೆನಕನಹಳ್ಳಿ ಏತ ನೀರಾವರಿ ಯೋಜನೆಯ 48 ಕೋಟಿ ರೂ. ಮೊತ್ತಕ್ಕೆ ಸಂಪುಟ ಒಪ್ಪಿಗೆ ನೀಡಿದೆ. ನಂಜನಗೂಡು ತಾಲೂಕಿನ ಹೊಸಪುರ ಕೆರೆಯಿಂದ ನಂಜನಗೂಡು, ಗುಂಡ್ಲುಪೇಟೆ ತಾಲೂಕಿನ 9 ಕೆರೆಗಳಿಗೆ ಹಾಗೂ 9 ಸಣ್ಣ ಕಟ್ಟೆಗಳಿಗೆ ನೀರು ತುಂಬಿಸುವ 14 ಕೋಟಿ ರೂ. ಮೊತ್ತದ ಯೋಜನೆಗೆ ಸಂಪುಟ ಅನುಮೋದನೆ ನೀಡಿದೆ ಎಂದು ಹೇಳಿದರು.